ಬೇಸಿಗೆ ಬೆಳೆಗೂ ನೀರು ಬಿಡಬೇಕಾಗಿದೆ ಮತ್ತು ಮುಂಗಾರು ಬೆಳೆಗೂ ನೀರು ಬಿಡಬೇಕಾಗಿದೆ. ಆದ್ದರಿಂದ ಈ ಕೆಲಸ ನಿಧಾನವಾಗುತ್ತಿದೆ. ಅಲ್ಲಿನ ರೈತರು ಸಹಕಾರ ನೀಡಿದರೆ ನಾವು ಜಾಗ್ರತೆ ಈ ಲೈನಿಂಗ್ ಕೆಲಸ ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಜೆ. ಜಮಖಂಡಿ.— ಈಗ ರೈತರ ಸಹಕಾರ ತೆಗೆದುಕೊಂಡೇ ಈ ಕೆಲಸ ಮಾಡುತ್ತಿದ್ದಾರೆ. ೧೦೯ ಕಿಲೋಮೀಟರ್ ಪೈಕಿ ಕೇವಲ ೧೫ ರಿಂದ ೩೦ ಕಿಲೋಮೀಟರ್‌ವರೆಗೆ ಲೈನಿಂಗ್ ಕೆಲಸ ಮುಗಿದಿದೆ. ಇನ್ನುಳಿದ ಲೈನಿಂಗ್ ಕೆಲಸ ಮುಗಿಯದ ಕಾರಣದಿಂದ ಸುಮಾರು ೫೦೦ ಕ್ಯೂಸೆಕ್ಸ್‌ನಷ್ಟು ನೀರು ಹೊರ ಹೋಗುತ್ತಿದೆ. ಇದರಿಂದ ಆ ಭಾಗದ ಜಮೀನೆಲ್ಲಾ ಚೌಳಾಗುತ್ತಿದೆ. ಆದ್ದರಿಂದ ಲೈನಿಂಗ್ ಕೆಲಸವನ್ನು ತೀವ್ರವಾಗಿ ಮಾಡಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಲೈನಿಂಗ್ ಕೆಲಸ ಮಾಡುವುದರಲ್ಲಿ ವಿವಾದವಿಲ್ಲ. ಈ ಕೆಲಸವನ್ನು ರೈತರ ಸಹಕಾರ ತೆಗೆದುಕೊಂಡು ಮಾಡಬೇಕಾಗುತ್ತದೆ. ಬೇಸಿಗೆ ಬೆಳೆ ಮತ್ತು ಮುಂಗಾರಿನ ಬೆಳೆಗೆ ನೀರನ್ನು ಬಿಡಬೇಕಾದ ಕಾರಣದಿಂದ ನಮಗೆ ಈ ಕೆಲಸ ಮಾಡಲು ಸಾಕಷ್ಟು ಸಮಯ ಸಿಗುತ್ತಿಲ್ಲ. ಒಂದು ವರ್ಷ ರೈತರು ಬೇಸಿಗೆ ಬೆಳೆ ಬೆಳೆಯುವುದನ್ನು ನಿಲ್ಲಿಸಿದರೆ ನಾವು ಜಾಸ್ತಿ ಕೆಲಸ ಮಾಡಬಹುದು. ಇಲ್ಲದಿದ್ದರೆ ಸ್ವಲ್ಪಸ್ವಲ್ಪವೇ ಕೆಲಸ ಆಗುತ್ತದೆ. ಇದಕ್ಕೆ ಪ್ರಮುಖವಾಗಿ ಅಲ್ಲಿನ ರೈತರ ಸಹಕಾರ ಬೇಕು. ಮಾನ್ಯ ಸದಸ್ಯರು ಹೇಳಿದಂತೆ ಕಾಲುವೆ ಒಡೆದಿರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಒಂದುವೇಳೆ ಎಲ್ಲಿಯಾದರೂ ಆಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ನಾವು ರಿಪೇರಿ ಮಾಡಿಸುತ್ತೇವೆ.

ಅಂಗನವಾಡಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ,

೧೬೬೨. ಶ್ರೀ ಓಂಕಾರಮೂರ್ತಿ (ಕಡೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಗ್ರ ಬಾಲವಿಕಾಸ ಯೋಜನೆಯ ಅಡಿಯಲ್ಲಿ ಒಂದು ತಾಲ್ಲೂಕಿಗೆ ಒಂದುನೂರು ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ಬಹುತೇಕ ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಕಡೂರು ತಾಲ್ಲೂಕಿನಲ್ಲಿ ೩೦೭ ಹಳ್ಳಿಗಳಿದ್ದು ಕೇವಲ ೧೦೦ ಅಂಗನವಾಡಿಗಳು ಮಾತ್ರ ರಾಜ್ಯ ಸರ್ಕಾರದಿಂದ ನಡೆಯುತ್ತಿದ್ದು ಉಳಿದ ೨೦೭ ಗ್ರಾಮಗಳಿಗೆ ಮಂಜೂರಾಗದಿರಲು ಕಾರಣಗಳೇನು? ೧೯೮೬-೮೭ನೇ ಸಾಲಿನಲ್ಲಾದರೂ ಮಂಜೂರು ಮಾಡಲಾಗುವುದೆ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ವತಿಯಿಂದ ನಡಿಯುತ್ತಿರುವ ಯೋಜನೆಗಳ ಮಂಟ್ಪಿಗೆ ೩ದು ನಿಜ.

ಆ) ಕಡೂರು, ರಾಜ್ಯ ಸರ್ಕಾರದ ಯೋಜನೆಯಾಗಿದ್ದು ೧೦೦ ಅಂಗನವಾಡಿಗಳು ಮಾತ್ರ ಮಂಜೂರಾಗಿವೆ. ಈ ವರ್ಷ ಅಂಗನವಾಡಿ ವಿಸ್ತರಣಾ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಕೈಗೊಂಡಿಲ್ಲ. ಹೀಗಾಗಿ ಉಳಿದ ಹಳ್ಳಿಗಳಿಗೆ ಅಂಗನವಾಡಿಗಳನ್ನು ಮಂಜೂರು ಮಾಡಿಲ್ಲ. ಹಣದ ಅಭಾವದಿಂದಾಗಿ ರಾಜ್ಯದ ಐಸಿಡಿಎಸ್ ಯೋಜನೆಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಅಂಗನವಾಡಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಕಡೂರು ತಾಲ್ಲೂಕ್ ಎರಡು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಆದರೂ ಸಹ ಇಲ್ಲಿ ಕೇವಲ ನೂರು ಅಂಗನವಾಡಿಗಳು ಸಣ್ಣಸಣ್ಣ ಹಳ್ಳಿಗಳಲ್ಲಿ ಪ್ರಾರಂಭವಾಗಿವೆಯೇ ಹೊರತು ದೊಡ್ಡದೊಡ್ಡ ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ತೆರೆದಿಲ್ಲ. ದೊಡ್ಡದೊಡ್ಡ ಹಳ್ಳಿಗಳಲ್ಲಿಯೂ ಸಹ ಸುಮಾರು ೧೪ಳ ಅಂಗನವಾಡಿಗಳನ್ನು ಪ್ರಾರಂಭ ಮಾಡಬೇಕೆಂದು ೩-೪ ವರ್ಷಗಳ ಹಿಂದೆಯೇ ಪ್ರಪೋಸಲ್‌ನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ಪ್ರಾರಂಭ ಮಾಡಿಲ್ಲ. ಇದಕ್ಕೆ ಕಾರಣವೇನು? ಈ ವರ್ಷವಾದರೂ ಪ್ರಾರಂಭ ಮಾಡುತ್ತೀರಾ?

ಶ್ರೀ ವಿ.ಎಲ್. ಪಾಟೀಲ್.—ಅಂಗನವಾಡಿಗಳನ್ನು ಪ್ರಾರಂಭ ಮಾಡಬೇಕಾದರೆ ಕೆಲವು ನಿಯಮಗಳಿವೆ. ಯಾವುದೇ ಹಳ್ಳಿಯಲ್ಲಿ ಅಂಗನವಾಡಿಯನ್ನು ಪ್ರಾರಂಭ ಮಾಡಬೇಕಾದರೆ ಅದು ಹಿಂದುಳಿದ

ಪ್ರದೇಶವಾಗಿರಬೇಕು, ಬರಗಾಲ ಪೀಡಿತ ಪ್ರದೇಶವಾಗಿರಬೇಕು, ಹೆಚ್ಚಿನಸಂಖ್ಯೆಯಲ್ಲಿ ಹರಿಜನರು ವಾಸವಾಗಿರಬೇಕು. ಇದನ್ನೆಲ್ಲಾ ನೋಡಿಕೊಂಡು ನಾವು ಪ್ರಾರಂಭ ಮಾಡುತ್ತೇವೆ. ಪಂಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸಾಧ್ಯವಾದಷ್ಟೂ ಹೆಚ್ಚಿನ ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ತೆರೆಯಲು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಂಗನವಾಡಿಗಳನ್ನು ತೆರೆಯಲು ಕ್ರೈಟೀರಿಯಾ ಏನಿರಬೇಕು? ನಾನ್–ಇರಿಗೇಟೆಡ್ ಲ್ಯಾಂಡ್ ಇರಬೇಕೇ, ಜನರು ಕಾಯಿಲೆಯಿಂದ ನರಳುತ್ತಿರಬೇಕೇ? ಹೊಟ್ಟೆಗಿಲ್ಲದ ಜನರು ಇರಬೇಕೇ? ಬರಗಾಲ ಪೀಡಿತ ಪ್ರದೇಶವಾಗಿರಬೇಕೇ ಅಥವಾ ಎಲ್ಲವೂ ಸಂವೃದ್ಧಿಯಾಗಿರುವಂತಹ ಪ್ರದೇಶಗಳಲ್ಲಿ ಇವುಗಳನ್ನು ತೆರೆಯುತ್ತೀರಾ ಹೇಗೆ?

ಶ್ರೀ ವಿ. ಎಲ್. ಪಾಟೀಲ್.—ನಾವು ಈಗಾಗಲೇ ರಾಜ್ಯ ಸರ್ಕಾರದ ವತಿಯಿಂದ ೩ ಸಾವಿರದ ೭೬ ಅಂಗನವಾಡಿಗಳನ್ನು ಪ್ರಾರಂಭ ಮಾಡಿದ್ದೇವೆ. ಕೇಂದ್ರ ಸರ್ಕಾರದ ವತಿಯಿಂದ ೧೦ ಸಾವಿರದ ೦೮೭ ಅಂಗನವಾಡಿಗಳನ್ನು ಪ್ರಾರಂಭ ಮಾಡಿದ್ದೇವೆ. ಇವುಗಳನ್ನು ತೆರೆಯಬೇಕಾದರೆ, ಹಿಂದುಳಿದ ಪ್ರದೇಶವಾಗಿರಬೇಕು, ಹರಿಜನರು ಹೆಚ್ಚಿರಬೇಕು, ಬರಗಾಲದಿಂದ ಕೂಡಿರುವಂತಹ ಪ್ರದೇಶವಾಗಿರಬೇಕು. ಇಂತಹ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ತೆರೆಯಲು ಕೇಂದ್ರದವರು ಮಂಜೂರು ಮಾಡಿದನಂತರ ನಾವು ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ತಾಲ್ಲೂಕ್‌ನಲ್ಲಿ ಸಾಕಷ್ಟು ಅಂಗನವಾಡಿಗಳನ್ನು ತೆರೆಯದಿರಲು ಕಾರಣವೇನು? ಆ ಪ್ರದೇಶ ಎಲ್ಲ ರೀತಿಯಿಂದಲೂ ಪರಿಪೂರ್ಣವಾಗಿದೆ ಎಂದು ಅರ್ಥವೇ?

ಶ್ರೀ ವಿ. ಎಲ್. ಪಾಟೀಲ್.—ಇವುಗಳನ್ನು ತೆರೆಯಬೇಕಾದರೆ ಅಲ್ಲಿರುವಂತಹ ಷೆಡ್ಯೂಲ್ಡ್ ಕ್ಯಾಸ್ಟ್ ಜನರ ಸಂಖ್ಯೆಯನ್ನು ನೋಡಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಜನರೂ ಸಹ ಇದ್ದಾರೆ. ಆದರೆ ತಾವು ಸರಿಯಾಗಿ ನೋಡುತ್ತಿಲ್ಲ.

ಉಪಾಧ್ಯಕ್ಷರು.—ಎಲ್ಲ ವಿವರಗಳನ್ನು ತಾವು ತರಿಸಿಕೊಂಡು ನೋಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಶ್ರೀ ಎಸ್. ಡಿ. ಜಯರಾಂರವರ ಪರವಾಗಿ ನನಗೆ ಈ ಪ್ರಶ್ನೆಯನ್ನು ಕೇಳಲು ಅನುಮತಿ ಕೊಡಿ. ಅವರು ನನಗೆ ಲಿಖಿತ ಮೂಲಕ ಆದೇಶ ನೀಡಿಲ್ಲ.

ಅಧ್ಯಕ್ಷರು.—ಇಲ್ಲ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕು ಬೆಡ್ಕಿಹಾಳ ಹತ್ತಿರ ನಾಗಜರಿ ಇಂಗುವ ಕೆರೆಯ ಬಗ್ಗೆ

೧೫೯೭. ಶ್ರೀ ವೀರಕುಮಾರ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕು ಬೆಡಕಿಹಾಳ ಹತ್ತಿರದ ನಾಗಜರಿ ಇಂಗು ಕೆರೆಯನ್ನು ಬಹಳ ಹಿಂದೆಯೇ ಮಂಜೂರಾಗಿದ್ದರೂ, ಕೆಲಸ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು?

ಆ) ಈ ಕೆಲಸವನ್ನು ತೆಗೆದುಕೊಳ್ಳಲು ಸರ್ಕಾರವೇನಾದರೂ ಆಶ್ವಾಸನೆಯನ್ನು ನೀಡಿದೆಯೇ?

ಇ) ಹಾಗಿದ್ದಲ್ಲಿ, ಕೆಲಸ ಪ್ರಾರಂಭಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮುಳುಗಡೆ ಜಮೀನುಗಳ ಭೂ ಸ್ವಾಧೀನ ನಡವಳಿಕೆಗಳಿಗೆ ಉಚ್ಚನ್ಯಾಯಾಲಯ ತಡೆಯಾಜ್ಞೆ ನೀಡಿರುವುದರಿಂದ ಕೆಲಸ ಪ್ರಾರಂಭಿಸಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.